**ಸಿ.ಸಿ. ನಂ. 4573/2021**
ಪಿ.ಡಬ್ಲು-೧

ಸಾಕ್ಷಿಯನ್ನು ಇಂದು ದಿನಾಂಕ: *14.12.2023* ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎಂ.ಎ.ಇ. ವಕೀಲರಿಂದ**

ಚಾಸಾ-೯ ನನ್ನ ಸಹೊದರ. ಲಕ್ಷ್ಮಿಕಾಂತ ತಂದೆ ಮಲ್ಲಿನಾಥ ನನ್ನ ಮಗನಾಗಬೇಕು. ಚಾಸಾ-೮ ರ ಹೆಸರಿನವರು ನಮ್ಮ ಊರಿನಲ್ಲಿ ಯಾರೂ ಇರುವುದಿಲ್ಲ. ಚಾಸಾ-2 ರಿಂದ 6, 10 ರಿಂದ 12 ರವರು ನಮ್ಮ ಸಂಬಂಧಿಕರಾಗಬೇಕು ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ನಮ್ಮ ಊರಿನವರು ಆಗಬೇಕು ಎಂದು ನುಡಿಯುತ್ತಾರೆ. ನನಗೆ ಓದಲು ಬರೆಯಲು ಬರುವುದಿಲ್ಲ. ನಿಪಿ-೧ರಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ. ಆಳಂದ ಬಸ್ ಸ್ಟ್ಯಾಂಡ್ ಎದುರುಗಡೆ ಇರುವ ಕಲಬುರಗಿ- ಉಮರ್ಗಾ ರಸ್ತೆ ರಾಜ್ಯ ಹೆದ್ದಾರಿ ಎಂದರೆ ಸರಿ. ಸದರಿ ರೆಸ್ತೆಯು ಬಸ್ ನಿಲ್ದಾಣದ ಎದರುಗಡೆ ಎರಡು ಭಾಗಗಳಾಗಿರುತ್ತವೆ ಎಂಧರೆ ಸರಿ, ಒಂದು ಕಲಬುರಗಿ ಕಡೆಗೆ ಒಂದು ಉಮರ್ಗಾ ಕಡೆಗೆ ಹೋಗುತ್ತದೆ ಎಂದರೆ ಸರಿ. ಬಿ.ಎಸ್.ಎನ್.ಎಲ್ ಕಚೇರಿ ಮುಂದುಗಡೆ ರಸ್ತೆ ತಡೆ ಇದೆ ಎಂದರೆ ಸರಿ, ಸಾಕ್ಷಿ

ಮುಂದುವರೆದು ಅಲ್ಲಿ ಅಪಘಾತವಾಗಿರುವುದಿಲ್ಲ ಎ.ಪಿ.ಎಂ.ಸಿ. ಕಾಂಪ್ಲೆಕ್ಸ ಹತ್ತಿರ ಅಪಘಾತ ಆಗಿರುತ್ತದೆ ಎಂದು ನುಡಿಯುತ್ತಾರೆ. ಬಿ.ಎಸ್.ಎನ್.ಎಲ್. ಆಫೀಸ್ ಪಕ್ಕದಲ್ಲಿ ಅಗ್ನಿಶಾಮಕ ಪೋಲಿಸ್ ಠಾಣೆ ಇದೆ ಎಂಧರೆ ಸರಿ. ಸದರಿ ಅಗ್ನಿ ಶಾಮಕ ಪೋಲಿಸ್ ಠಾಣೆ ಎದುರುಗಡೆ ಡಿಗ್ರಿ ಕಾಲೇಜು ಇದೆ ಎಂಧರೆ ಸರಿ. ಸದರಿ ಡಿಗ್ರಿ ಕಾಲೇಜು ಎದುರುಗಡೆ ರಸ್ತೆ ತಡೆ ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದ ನನ್ನ ಮಗನಿಗೆ ಅಪಘಾತವಾದ ಸ್ಥಳದಲ್ಲಿ ರಸ್ತೆ ತಡೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಬಸ್ ನಿಲ್ದಾಣದಿಂದ ಯಾವುದೇ ಬಸ್ಸು ರಸ್ತೆಗೆ ಬರಬೇಕಾದರೆ ಯಾವುದೇ ವಾಹನಗಳು ನಿಲ್ಲುತ್ತವೆ ಎಂದರೆ ಸರಿ. ಬಸ್ ನಿಲ್ದಾಣದ ಎದುರುಗಡೆ ಶ್ರೀರಾಮ ಮಾರ್ಕೆಟಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ಬಸ್ ನಿಲ್ದಾಣದ ಬಳಿ ಯಾವಾಗಲು ಇಬ್ಬರು ಪೋಲಿಸರು ನಿಲ್ಲುತ್ತಾರೆ ಎಂಧರೆ ಸರಿ.

ಘಟನೆಯು ಸಂಜೆ 7.30 ಗಂಟೆಗೆ ಆಗಿರುತ್ತದೆ ಎಂದು ನನಗೆ ಕರೆ ಬಂದಿರುತ್ತದೆ. ನನಗೆ ಯಾವ ನಂಬರಿನಿಂದ ಕರೆ ಬಂದಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಘಟನೆ ಆದ 5-10 ನಿಮಿಷದಲ್ಲಿ ನಾನು ಆಳಂದಕ್ಕೆ ಬಂದಿರುತ್ತೇನೆ. ನನಗೆ ಘಟನೆ ಕುರಿತು ಕರೆ ಬಂದಾಗ ನಾನು ತಲೆಕುಣಿಯ ಮನೆಯಲ್ಲಿ ಇದ್ದೆನು. ತೆಲೆಕುಣಿಯಿಂದ ಆಳಂದ ಬಸ್ ನಿಲ್ದಾಣ 5 ಕಿ.ಮೀ. ಇದೆ. ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿರಲಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಘಟನೆ ಆದದ್ದನ್ನು ಬಂದು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಘಟನೆ ಸ್ಥಳದಲ್ಲಿ ಘಟನೆ ಆದ 10 ನಿಮಿಷಯದಲ್ಲಿ ಇದ್ದೆನು ಎಂದು ನಾನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಪೋಲಿಸರು ಕೇಳಿರುವುದಿಲ್ಲ, ನಾನು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ.

ಘಟನಾ ಸ್ಥಳದ ಚೆಕಬಂದಿ ನನಗೆ ಹೇಳಲು ಬರುತ್ತದೆ, ಪೂರ್ವಕ್ಕೆ ಅಂಬಾಬಾಯಿ ಗುಡಿ, ಮೆಡಿಕಲ್ ಶಾಪಗಳು ಇವೆ, ಪಶ್ಚಿಮಕ್ಕೆ ಎ.ಪಿ.ಎಂ.ಸಿ. ಕಾಂಪ್ಲೆಕ್ಸ ಒಳಗೆ ಬರುತ್ತದೆ, ಅದಕ್ಕಿಂತ ಮುಂಚೆ ಸಿಮೆಂಟ ಅಂಗಡಿ ಮತ್ತು ಇನ್ನಿತರ ಅಂಗಡಿಗಳು ಇರುತ್ತವೆ. ಉತ್ತರಕ್ಕೆ ಉಮರ್ಗಾಕ್ಕೆ ಹೋಗುವ ರಸ್ತೆ, ದಕ್ಷಿಣಕ್ಕೆ ಗುಲಬರ್ಗಾಕ್ಕೆ ಹೋಗುವ ರಸ್ತೆ ಇರುತ್ತದೆ. ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದ ನನಗೆ ಓದಲು ಬರೆಯಲು ಬರುವುದಿಲ್ಲ, ಪಂಚನಾಮೆ ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ. ಅಪಘಾತಪಡಿಸಿದ ವಾಹನದ ಸಂಖ್ಯೆ 7665 ಇರುತ್ತದೆ. ಆಳಂದ- ಉಮರಗಾ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಅಲ್ಲಿ ಸಾಕಷ್ಟು ವಾಹನಗಳು ಓಡಾಡುವುದರಿಂದ ಅಲ್ಲಿ ವಾಹನವನ್ನು ಜೋರಾಗಿ ಓಡಿಸಲು ಬರುವುದಿಲ್ಲ ಎಂದರೆ ಸರಿ ಅಲ್ಲ. ರಸ್ತೆ ತಡೆಗಳು ಇರುತ್ತವೆ, ಗಾಡಿಗಳು ಇರುತ್ತವೆ ಆದ್ದರಿಂದ ವಾಹನವನ್ನು ಜೋರಾಗಿ ಓಡಿಸಲು ಬರುವುದಿಲ್ಲ ಎಂದರೆ ಸರಿ ಅಲ್ಲ. ಈ ಘಟನೆ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ ಅಲ್ಲ. ಘಟನೆ ನಡೆಯುವ ಸಮಯದಲ್ಲಿ ನಾನು ಪ್ರತ್ಯಕ್ಷವಾಗಿ ಇರುವುದಿಲ್ಲ ಆದಕಾರಣದಿಂದ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ಕಳೆದ ಮೂರು ವರ್ಷಗಳ ಹಿಂದೆ ದಿನಾಂಕ: 21, 3 ನೇ ತಿಂಗಳಿನಂದು ಬಸ್ ಸ್ಟ್ಯಾಂಡ ದಾಟಿ ಎ.ಪಿ.ಎಂ.ಸಿ. ಕಾಂಪ್ಲೆಕ್ಸ ಎದುರುಗಡೆ ಅಪಘಾತವಾಗಿರುತ್ತದೆ, ಅಪಘಾತವಾದ ನಂತರ ನನ್ನ ಮಗ ಸ್ಥಳದಲ್ಲೇ ಮೃತನಾಗಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಧರೆ ಸರಿ ಅಲ್ಲ. ಪಾಸಾ-೧೦ ರವರು ಸದರಿ ಅಪಘಾತದ ವಿಷಯವನ್ನು ನನಗೆ ಕರೆ ಮಾಡಿ ತಿಳಿಸಿರುತ್ತಾರೆ, ನಂತರ ನಾನು ಸ್ಥಳಕ್ಕೆ

ಬಂದು ನೋಡಿದಾಗ ನನ್ನ ಮಗ ಮೃತನಾಗಿದ್ದನು, ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಂತರ ಶವ ಪಂಚನಾಮೆ ಜರುಗಿಸಿರುತ್ತಾರೆ, ಮರುದಿನ ಶವ ಸಂಸ್ಕಾರವನ್ನು ಮಾಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಪೋಲಿಸರು ನಾನು ತೋರಿಸದ ಜಾಗದಲ್ಲಿ ಪಂಚನಾಮೆಯನ್ನು ಜರುಗಿಸಿ ಅಪಘಾತಪಡಿಸಿದ ವಾಹನವನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ